ಉದಯವಾಣಿ 25 ಏಪ್ರಿಲ್ 2010



ವಿಶ್ವಶಾಂತಿಗಾಗಿ ಶ್ರೀನಾರಾಯಣಾನಂದ ಸ್ವಾಮೀಜಿಯವರು ತಮ್ಮ ಹುಟ್ಟೂರಾದ ಮಾದಿಹಳ್ಳಿ ಪಾಳ್ಯದಲ್ಲಿ ವಿಶೇಷ ಚಂಡಿಹೋಮ ಏರ್ಪಡಿಸಿ ಪೂಜೆ ನಡೆಸುತ್ತಿರುವುದು. ಶ್ರೀಸುಬ್ರಹ್ಮಣ್ಯ ಜೋಯಿಸ್, ಮುರುಳಿ, ಗಿರೀಶ್, ರಾಮದಾಸ್ ಮತ್ತಿತರರು ಉಪಸ್ಥಿತರಿದ್ದರು.

# ವಿಶ್ವ ಶಾಂತಿಗಾಗಿ ಚಂಡಿ ಹೋಮ

**ತುರುವೇಕೆರೆ:** ತಾಲೂಕಿನ ಮಾದಿಹಳ್ಳಿ ಪಾಳ್ಯದಲ್ಲಿ ಹುಟ್ಟಿ ಈಗ ಕಳೆದ 18 ವರ್ಷಗಳಿಂದ ಅಮೆರಿಕಾದ ಕ್ಯಾಲಿ ಫೋರ್ನಿಯಾದಲ್ಲಿ ವಿವಿಧ ಧಾರ್ಮಿಕ ಸಂಸ್ಥೆಗಳಲ್ಲಿ ಸೇವೆಗೈದು ತಮ್ಮದೇ ಆದ ಬಾಲಾಜಿ ಮಠವನ್ನು ಸ್ಥಾಪಿಸಿರುವ ಶ್ರೀನಾರಾಯಣಾನಂದ ಸ್ವಾಮೀಜಿಯವರು ತಮ್ಮ ಹುಟ್ಟೂರಿನಲ್ಲಿ ಲೋಕ ಕಲ್ಯಾಣಕ್ಕಾಗಿ ವಿಶೇಷ ಚಂಡಿ ಹೋಮವನ್ನು ಏರ್ಪಡಿಸಿದ್ದು, ಈ ಚಂಡಿ ಹೋಮದಲ್ಲಿ ವಿವಿಧ ಕಡೆಯಿಂದ ಭಕ್ತರು ಆಗಮಿಸಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀನಾರಾಯಣಾನಂದ ಸ್ವಾಮೀಜಿಯವರು ಇನ್ನೇನು ಕೆಲವೇ ದಿನಗಳಲ್ಲಿ ಬೆಂಗಳೂರಿನಲ್ಲಿ ಬಾಲಾಜಿ ಮಠ ಸ್ಥಾಪಿಸುವುದಾಗಿ ಈ ಮಠ ಸ್ಥಾಪಿಸಲು ಈಗಾಗಲೇ ಭೂಮಿಯನ್ನು ಸಹ ತೆಗೆದುಕೊಂಡಿದ್ದು, ಈ ಬಾಲಾಜಿ ಮಠದ ಮೂಲಕ ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಪತ್ರಿಕೆಗೆ ತಿಳಿಸಿದರು.